**ಚಿತ್ರರಂಗದಲ್ಲಿನ ಹದಿನೈದು ವರ್ಷಗಳ ಅನುಭವವನ್ನು ಒಟ್ಟಾಗಿಸಿ ಸಿನಿಮಾ ನಿರ್ದೇಶನಕ್ಕೆ ಅಡಿಯಿಟ್ಟಿದ್ದಾರೆ ನಟ ಆರ್ಯನ್ ಸಂತೋಷ್. 'ಚೆಂಕೋಲ್; ದಿ ಲಾಸ್ಟ್ ಕಿಂಗ್ಡಮ್' ಮೂಲಕ ಪ್ರೇಕ್ಷಕರನ್ನು ತಲುಪಲು ಹೊರಟಿರುವ ಅವರು, ತಮ್ಮ ಈ ಹೊಸ ಪ್ರಯತ್ನದ ಬಗ್ಗೆ ಮಾತನಾಡಿದ್ದಾರೆ.**

**◆ 'ಚೆಂಕೋಲ್' ಟೀಸರ್ ನೋಡಿದರೆ ಐತಿಹಾಸಿಕ ಕಥೆಯಂತಿದೆ. ಐತಿಹಾಸಿಕ ವಿಷಯ ಆರಿಸಿಕೊಳ್ಳುವುದು ಒಂದು ರೀತಿ ರಿಸ್ಕ್ ಕೂಡ ಹೌದಲ್ಲವೆ?**

ಡಿಜೆ ಸಂತು ಪಾತ್ರದಿಂದ ಕಥೆ ಆರಂಭವಾಗುತ್ತದೆ. ಎರಡು ಭಾಗಗಳಲ್ಲಿ ಸಿನಿಮಾ ಯೋಜಿತವಾಗಿದೆ. ಅಗಸ್ತ್ಯ ರಾಜನ ಕಥೆಯನ್ನು ಸಿನಿಮಾ ಒಳಗೊಂಡಿದೆ. 6ನೇ ಶತಮಾನದ ಮೂಷಿಕ ನಾಯಕ, ಆ ಸಾಮ್ರಾಜ್ಯದ ಕಥೆ ಇದೆ. ಸಂತುವಿಗೂ ಕೇರಳದ 'ಚೆಂಕೋಲ್'ಗೂ ಏನು ಸಂಬಂಧ ಎಂಬುದನ್ನು ತೆರೆದಿಡುತ್ತಾ ಹೋಗುತ್ತದೆ.

ಭಾಗ ಎರಡರಲ್ಲಿ ಐತಿಹಾಸಿಕ ಕಥೆಯಿದೆ. ಐತಿಹಾಸಿಕ ವಿಷಯ ರಿಸ್ಕ್ ಹೌದಾದರೂ ಅದಕ್ಕೆ ತಯಾರಿ ಮಾಡಿಕೊಳ್ಳುತ್ತಿದ್ದೇನೆ. ಈಗಾಗಲೇ, ಸೆಟ್, ಪ್ರಾಪರ್ಟಿಗಳು, ರಿಸರ್ಚ್ ಆರಂಭಿಸಿದ್ದೇನೆ. ಭಾಗ 1ರಲ್ಲಿರುವ ಮೈಲೇಜ್ ಕಾಯ್ದುಕೊಂಡು ಭಾಗ 2ರಲ್ಲಿ ಅಗಸ್ತ್ಯನ ಕಥೆಯನ್ನು ಕುತೂಹಲಭರಿತವಾಗಿ ಹೆಣೆಯುವಲ್ಲಿ ತೊಡಗಿಕೊಂಡಿದ್ದೇನೆ. ಶ್ರೀಲಂಕಾ, ಥಾಯ್ಲೆಂಡ್, ಬಾಹುಬಲಿ ಶೂಟಿಂಗ್ ನಡೆದ ಮಹಾಬಲಿಪುರಂ ಇಂಥ ಜಾಗಗಳಿಗೆ ಭೇಟಿ ಕೊಟ್ಟು ಹಲವು ತಯಾರಿಗಳನ್ನು ಮಾಡಿಕೊಂಡಿದ್ದೇನೆ.

**◆ ಸಿನಿಮಾ ಶೀರ್ಷಿಕೆ ಏನು ಹೇಳಲು ಹೊರಟಿದೆ? ಬಿಡುಗಡೆ ಯಾವಾಗ?**

'ಚೆಂಕೋಲ್' ಎಂದರೆ ರಾಜದಂಡ. ಆಗಿನ ಕಾಲದಲ್ಲಿ ರಾಜನಿಗೆ ಅವನ ಶೌರ್ಯ, ಧೈರ್ಯವನ್ನು ಮೆಚ್ಚಿ ಚೆಂಕೋಲ್ ಕೊಡುತ್ತಿದ್ದರು. ಸಿನಿಮಾಗೆ ಶಕ್ತಿಯುತ ಶೀರ್ಷಿಕೆ ಬೇಕಿತ್ತು. 'ಚೆಂಕೋಲ್' ಅದಕ್ಕೆ ಸೂಕ್ತವೆನಿಸಿತು. ಆ ಪದ ತುಂಬಾ ಜನರಲ್ಲಿ ಕುತೂಹಲ ಮೂಡಿಸಿದೆ. ಕನ್ನಡ ಹಾಗೂ ಮಲಯಾಳಂನಲ್ಲಿ ಸಿನಿಮಾ ಮೂಡಿಬರುತ್ತಿದೆ. ಸಿನಿಮಾದಲ್ಲಿ ಶೇ. 60 ಕನ್ನಡ, ಶೇ. 40 ಮಲಯಾಳಂ ಇದೆ. ಡಬ್ಬಿಂಗ್ ಮಾಡಲು ಹೋಗಿಲ್ಲ. ಭಾಷೆ ಸಿನಿಮಾವನ್ನು ಜನರಿಗೆ ಕನೆಕ್ಟ್ ಮಾಡಲಿ ಎಂಬ ಕಾರಣಕ್ಕೆ.

ಎರಡು ವರ್ಷದ ಹಿಂದೆಯೇ ಚಿತ್ರೀಕರಣ ಆರಂಭವಾಗಿತ್ತು. ಕಥೆ, ಲೊಕೇಷನ್, ಶೂಟ್ ಮುಗಿಸಿದ ನಂತರ ಘೋಷಿಸಿದೆ. ಕೇರಳ, ಚಿಕ್ಕಮಗಳೂರು, ಬೆಂಗಳೂರು, ಚೆನ್ನೈನಲ್ಲಿ ಶೂಟಿಂಗ್ ಮಾಡಲಾಗಿದೆ. ಭಾಗ 1 ಅನ್ನು ಜುಲೈನಲ್ಲಿ ಬಿಡುಗಡೆ ಮಾಡುವ ಯೋಜನೆಯಿದೆ. ಭಾಗ 2ರ ಚಿತ್ರೀಕರಣವನ್ನು ಆಗಸ್ಟ್‌ನಿಂದ ಆರಂಭಿಸಲಾಗುತ್ತದೆ. ಮುಂದಿನ ವರ್ಷದಲ್ಲಿ ಎರಡನೇ ಭಾಗ ಬರುತ್ತದೆ.

**◆ ಜನರಿಗೆ ಈ ಸಿನಿಮಾ ಹೇಗೆ ಹತ್ತಿರವಾಗುತ್ತದೆ?**

ಚಿಕ್ಕವರಿದ್ದಾಗ ಅಜ್ಜಿ ಕಥೆಯನ್ನು ಕೇಳುತ್ತಿದ್ದಾಗ ಮೂಡುತ್ತಿದ್ದ ಕುತೂಹಲವೇ ಇಲ್ಲಿ ಕಾಣುತ್ತದೆ. ಭಾವನಾತ್ಮಕತೆ, ಮನುಷ್ಯನ ಅಸ್ತಿತ್ವ, ಜೀವನವನ್ನು ತೋರುವ ಕಲಿಯುಗದ ಕಥೆ ಎನ್ನಬಹುದು. ಜನರಿಗೆ ಇದು ಕನೆಕ್ಟ್ ಆಗುತ್ತದೆ.

**◆ ಯಾವ ರೀತಿಯ ಕಥೆಗಳನ್ನು ಸಿನಿಮಾ ಮಾಡಬೇಕೆಂಬ ಅಭಿಲಾಶೆಯಿದೆ?**

ಸಂಪೂರ್ಣ ಕೌಟುಂಬಿಕ ಮನರಂಜನಾ ಸಿನಿಮಾ ಮಾಡಬೇಕು ಎಂಬ ಆಸೆಯಿದೆ. ನಿಜ ಜೀವನದಲ್ಲಿ ಕಷ್ಟ ಇದ್ದೇ ಇರುತ್ತದೆ. ಸಿನಿಮಾ ನೋಡಿದ ಜನರು ನಗುತ್ತಾ ಖುಷಿಯೊಂದಿಗೆ ಮನೆಗೆ ಮರಳಬೇಕು, ಅಂಥ ಸಿನಿಮಾ ಮಾಡಬೇಕು. ಪೌರಾಣಿಕ ಕಥೆಗಳೂ ನನ್ನ ಇಷ್ಟದ ಪಟ್ಟಿಯಲ್ಲಿವೆ. ಒಂದು ಕಥೆ ಒಂದು ಸಂಸ್ಕೃತಿಯನ್ನು ತುಂಬಾ ಗಟ್ಟಿಯಾಗಿ ಪೊಸಿಷನ್ ಮಾಡುತ್ತದೆ. ಮರೆತುಹೋದ ಒಂದು ಸಮುದಾಯ, ಸಂಸ್ಕೃತಿಯನ್ನು ಮತ್ತೆ ಮುನ್ನೆಲೆಗೆ ತರುತ್ತದೆ. ಇಂಥ ಕಥೆಗಳನ್ನು ಜನ ಈಗ ಇಷ್ಟಪಡುತ್ತಿದ್ದಾರೆ ಕೂಡ.

**◆ ನಟನೆ– ನಿರ್ದೇಶನ ಎರಡನ್ನೂ ಒಟ್ಟಿಗೆ ತೂಗಿಸಿದ ಅನುಭವ?**

ನಿರ್ದೇಶನ ಎಂಬುದು ತಮಾಷೆಯಲ್ಲ. ಎಲ್ಲಾ ವಿಭಾಗವನ್ನೂ ನೋಡಿಕೊಳ್ಳಬೇಕು. ನಟನೆಯನ್ನೂ ಮಾಡಬೇಕು, ಸಹ ಕಲಾವಿದರನ್ನೂ ನೋಡಿಕೊಳ್ಳಬೇಕು, ಇವೆಲ್ಲವೂ ಸವಾಲು. ಬೇರೆ ಸಿನಿಮಾಗಳಲ್ಲಿ ಬೇರೆಯವರ ಅನುಭವಗಳನ್ನು ಹತ್ತಿರದಿಂದ ಕಂಡಿದ್ದೆ. ಈ ಸವಾಲನ್ನು ನಾನೇ ತೆಗೆದುಕೊಂಡಾಗ ಹಲವು ಹೊಸ ಅನುಭವಗಳಾದವು. ನಮ್ಮ ಹಿಂದಿನವರ ಹೆಜ್ಜೆ ಗುರುತುಗಳನ್ನು ಮತ್ತೆ ಮೆಲುಕು ಹಾಕಿದೆ. ಸಿನಿಮಾ ಕಟ್ಟುವ ಪ್ರಕ್ರಿಯೆಯನ್ನು ಸಂತಸದಿಂದ ಅನುಭವಿಸಿದೆ. ■

# ರೆಟ್ರೊ ಕಥೆಯಲ್ಲಿ ಚಂದನ್

**ಚಂದನ್ ಶೆಟ್ಟಿ ಅಭಿನಯದ ಹಾಗೂ 'ಗುಬ್ಬಿ ಮೇಲೆ ಬ್ರಹ್ಮಾಸ್ತ್ರ' ಖ್ಯಾತಿಯ ಸುಜಯ್ ಶಾಸ್ತ್ರಿ ನಿರ್ದೇಶನದ 'ಎಲ್ರ ಕಾಲೆಳಿಯತ್ತೆ ಕಾಲ' ಚಿತ್ರ ಇದೇ ಏ.17ರಂದು ತೆರೆಕಾಣಲಿದ್ದು, ಪ್ರಮುಖ ಪಾತ್ರಕ್ಕೆ ಚಂದನ್ ಶೆಟ್ಟಿ ಬಣ್ಣ ಹಚ್ಚಿದ್ದಾರೆ.**

ರೆಟ್ರೊ ಶೈಲಿಯ, 90ರ ಕಾಲಘಟ್ಟದ ಈ ಚಿತ್ರದಲ್ಲಿ ಚಂದನ್ ನಟಿಸಿದ್ದು, ಸಿನಿಮಾ ಹಾಗೂ ಸಿನಿಮಾ ನೀಡಿರುವ ಅನುಭವಗಳ ಕುರಿತು ಮಾತನಾಡಿದ್ದಾರೆ.

''ಎಲ್ರ ಕಾಲೆಳಿಯತ್ತೆ ಕಾಲ' ಸಿನಿಮಾದಲ್ಲಿ ಲೀಡ್ ಆಗಿ ಕಾಣಿಸಿಕೊಂಡಿದ್ದೇನೆ. ರಂಗಭೂಮಿಯವರಾದ ಸುಜಯ್ ಶಾಸ್ತ್ರಿ ಹಾಗೂ ರಾಜಗುರು ಹೊಸಕೋಟೆ ಅವರ ಜೊತೆ ಕೆಲಸ ಮಾಡಿದ್ದು ಉತ್ತಮ ಅನುಭವ. ಕುಟುಂಬ ಕುಳಿತು ನೋಡುವಂತೆ ಸಿನಿಮಾ ಹೆಣೆಯಲಾಗಿದೆ' ಎಂದು ಹೇಳಿದ್ದಾರೆ.

ಗೋಕುಲ ಎಂಟರ್‌ಟೇನರ್ಸ್ ಲಾಂಛನದಲ್ಲಿ ಗೋವಿಂದರಾಜು ನಿರ್ಮಿಸಿರುವ ಈ ಚಿತ್ರವು ಕಾಲದ ಮಹತ್ವ ಸಾರುವ ಕಥೆಯಾಗಿದೆ. 'ರಿಯಾಲಿಟಿ ಶೋನಲ್ಲಿ ಚಂದನ್ ಶೆಟ್ಟಿ ಅವರನ್ನು ನೋಡಿದ ನನಗೆ ನಮ್ಮ ಕಥೆಗೆ ಇವರೇ ಸೂಕ್ತ ನಾಯಕ ಎನಿಸಿತು. ನಂತರ ಚಂದನ್ ಅವರಿಗೆ ನನ್ನ ಗೆಳೆಯ ರಾಜಗುರು ಹೊಸಕೋಟೆ ಬರೆದಿರುವ ಚಿತ್ರದ ಕಥೆ ಹೇಳಿದ್ದೆವು. ಪೂರ್ವತಯಾರಿಯೊಂದಿಗೆ ಚಂದನ್ ಹಾಗೂ ಅರ್ಚನಾ ಕೊಟ್ಟಿಗೆ ಅಭಿನಯಿಸಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ ಸುಜಯ್ ಶಾಸ್ತ್ರಿ.

ಸಿನಿಮಾದೊಂದಿಗೆ, ಕನ್ನಡದ ರ್‍ಯಾಪರ್ ಚಂದನ್ ಶೆಟ್ಟಿ, ಇಂಗ್ಲಿಷ್ ಸಂಗೀತದಲ್ಲಿಯೂ ಪ್ರಯತ್ನ ಮಾಡಿದ್ದಾರೆ. 'ಡಯಾನಾ ಮೈಟ್' (ಡೈನಮೈಟ್ ಎಂದು ಉಚ್ಚರಿಸಲಾಗುತ್ತದೆ) ಮೂಲಕ ತಮ್ಮ ವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳುವ ಪ್ರಯತ್ನದಲ್ಲಿದ್ದಾರೆ ಅವರು. ■

